ಶ್ರೀ ರಮೇಶ ಜಿಗಜಿಣಗಿ (ಅಬಕಾರಿ ರಾಜ್ಯ ಸಚಿವರು).—

ಅ) ಹೌದು.

ಆ) ಈಗಾಗಲೇ ಶಹಬಾದಿನ ಸರ್ವೆ ನಂ. ೨೨೦ ಕ್ಕೆ ಸ್ಥಳಾಂತರಿಸಲಾಗಿದೆ.

ಇ) ಮೇಲಿನ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಇಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ಇಡೀ ಸದನಕ್ಕೆ ಸಂಬಂಧಪಟ್ಟ ಮಂತ್ರಿಗಳ ಈ ಉತ್ತರದಲ್ಲಿ ತಪ್ಪು ಮಾಹಿತಿ ಇದ್ದರೆ ಅಂಥವರ ಮೇಲೆ ಯಾವ ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ರಮೇಶ್ ಜಿಗಜಿಣಗಿ.— ಹಾಗೇನಾದರೂ ಇದ್ದರೆ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.— ಎಷ್ಟು ನೋಟಿಫಿಕೇಷನ್ ನೀವು ಮಾಡಿದ್ದೀರಿ, ಎಷ್ಟು ಆದೇಶ ಮಾಡಿದ್ದೀರಿ, ವರ್ಗಾಯಿಸುವುದಕ್ಕೆ

ಶ್ರೀ ರಮೇಶ್ ಜಿಗಜಿಣಗಿ.— ನಾನು ತರಿಸಿರುವ ವರದಿಗಳ ಪ್ರಕಾರ ಶಿಫ್ಟ್ ಮಾಡದೇ ಇದ್ದರೆ ಇಮ್ಮಿಡಿಯೇಟಾಗಿ ಶಿಫ್ಟ್ ಮಾಡಿಸಲು ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು.— ಶಾಣಪ್ಪನವರೇ, ಸಾಕಾ ಇನ್ನೂ ಕುಳಿತುಕೊಳ್ಳಿ.

೮೭೭. ಶ್ರೀ ಸಿ. ಕಣ್ಣನ್ (ಶಾಂತಿನಗರ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಂಬಳ ಪಡೆಯುತ್ತಿರುವ ಗ್ರಾಮಾಧಿಕಾರಿಗಳು ಎಷ್ಟು ಜನರಿದ್ದಾರೆ.

ಆ) ರಾಜದಲ್ಲಿರುವ ತೋಟಿ, ತಲವಾರರು ಮತ್ತು ನೀರಗಂಟಿಗಳು ಎಷ್ಟು ಜನರಿದ್ದಾರೆ.

ಇ) ಶ್ಯಾನುಭೋಗರು ಪಟೇಲರು, ತೋಟಿಗಳು, ತಳವಾರರು ಮತ್ತು ನೀರಗಂಟಿಗಳ ಸಂಬಳದ ಶ್ರೇಣಿ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಅ) ರಾಜ್ಯದಲ್ಲಿ ಸಂಬಳ ಪಡೆಯುತ್ತಿರುವ ೯,೨೧೩ ಜನ ಗ್ರಾಮ ಲೆಕ್ಕಿಗರಿದ್ದಾರೆ. ಇವರ ವೇತನ ಶ್ರೇಣಿ ರೂ. ೪೯೦-೧೫-೫೫೦-೨೦-೬೫೦-೨೫-೯೦೦-೩೦-೯೫೦.

ಆ) ೫೧,೯೧೪ ಜನ ಮಾಜಿ ತೋಟಿ; ತಳವಾರರು ಮತ್ತಿತರ ಕೆಳದರ್ಜೆ ಗ್ರಾಮಾಧಿಕಾರಿಗಳು ರಾಜ್ಯದಲ್ಲಿದ್ದು ಈ ಹುದ್ದೆಗಳನ್ನು ದಿನಾಂಕ ೧-೨-೧೯೬೩ ರಿಂದ ರದ್ದು ಮಾಡಲಾಗಿದೆ.

ಇ) ಈ ಹುದ್ದೆಯನ್ನು ದಿನಾಂಕ ೧-೨-೧೯೬೩ ರಿಂದ ರದ್ದು ಮಾಡಲಾಗಿದೆ. ಆದ್ದರಿಂದ ಕೆಳ ದರ್ಜೆಯ ಗ್ರಾಮಾಧಿಕಾರಿಗಳ ಸಂಬಳದ ಶ್ರೇಣಿ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಕಣ್ಣನ್. —ಗ್ರಾಮಲೆಕ್ಕಿಗರು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ನೂರಕ್ಕೆ ನೂರರಷ್ಟು ಲಂಚವನ್ನು ತೆಗೆದುಕೊಳ್ಳುತ್ತಾರೆ. ಅವರು ಲಂಚ ತೆಗೆದುಕೊಳ್ಳುವುದಕ್ಕೆ ಕಾರಣ ಅವರ ಸಂಬಳ ಕಡಿಮೆ ಇದೆ. ಅವರು ಬಡವರಿಗೆ ತೊಂದರೆ ಕೊಡುತ್ತಾರೆ ಸರ್ಕಾರ ಅವರ ಸಂಬಳವನ್ನು ಹೆಚ್ಚು ಮಾಡಿ ಲಂಚವನ್ನು ಕಡಿಮೆ ಮಾಡುತ್ತದೆಯೇ ೧೯೬೩ರಲ್ಲಿ ತೋಟಿ ತಳವಾರ ಹುದ್ದೆಗಳನ್ನು ರದ್ದು ಮಾಡಲಾಗಿದೆ ಆ ಕುಟುಂಬಗಳು ಜೀವನ ಮಾಡುವುದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡಿಕೊಟ್ಟಿದೆ ? ಈಗ ಆ ಕುಟುಂಬಗಳು ತೊಂದರೆಯಲ್ಲಿವೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನೂರಕ್ಕೆ ನೂರರಷ್ಟು ಲಂಚ ಇದೆಯೆಂದು ಹೇಳುವುದು ಸರಿಯಲ್ಲ. ಯಾವುದಾದರೂ ನಿರ್ದಿಷ್ಟವಾದ ಕೇಸ್ ಇದ್ದರೆ ಕೊಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಲಂಚ ತೆಗೆದುಕೊಳ್ಳುವುದನ್ನು ಸರಿಪಡಿಸುವುದು ಬಹಳ ಕಷ್ಟವೆಂಬುದು ತಮಗೂ ಗೊತ್ತಿದೆ. ೧೯೬೩ರಲ್ಲಿ ತೋಟಿ ತಳವಾರಿಕೆಗಳನ್ನು ರದ್ದು ಮಾಡಿದ ಮೇಲೆ ಗ್ರಾಮಗಳಲ್ಲಿ ಎಂದಿನಂತೆ ಕಲಸಕಾರ್ಯಗಳು ನಡೆಯುತ್ತಿವೆ. ಏನೂ ತೊಂದರೆಯಾಗಿಲ್ಲ. ತೋಟಿ ತಳವಾರಿಕೆಗೆ ಬದಲಾಗಿ ಗ್ರಾಮ ಸಹಾಯಕರನ್ನು

ನೇಮಿಸಿಕೊಂಡಿದ್ದೇವೆ. ಗ್ರಾಮ ಸಹಾಯಕರುಗಳು ನಮ್ಮನ್ನು 'ಡಿ' ಗ್ರೂಪ್‌ಗೆ ಸೇರಿಸಿ ಅವರಿಗೆ ಏನೇನು ಅನುಕೂಲಗಳಿವೆ ಅವುಗಳನ್ನು ನಮಗೂ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ ಹಣಕಾರಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಬಸವಲಿಂಗಪ್ಪ —ತೋಟಿ ತಳವಾರರುಗಳಿಗೆ ನಾವು ಇದ್ದಾಗಲೇ ಸಂಬಳವನ್ನು ನಿಗದಿ ಮಾಡಿದ್ದೇವೆ. ಪಟೇಲರು ಮತ್ತು ಶ್ಯಾನುಭೋಗರು ಏನಿದ್ದಾರೆ ಅವರುಗಳಿಗೆ ಏನು ಸಂಬಳ ಕೊಡುತ್ತೀರಿ ?

ಶ್ರೀ ಎಸ್.ಆರ್. ಬೊಮ್ಮಾಯಿ —ಪಟೇಲ್ ಶ್ಯಾನುಭೋಗರುಗಳಿಗೆ ಸಂಬಳ ಕೊಡುತ್ತಿಲ್ಲ ಪೆನ್‌ಷನ್ ಕೊಡುತ್ತಿದ್ದೇವೆ.

ಶ್ರೀ ಬಿ. ಬಸಲಿಂಗಪ್ಪ.—ಅವರಿಗೆ ಸಂಬಳ, ಇವರಿಗೆ ಪೆನ್‌ಷನ್ ಇಬ್ಬರಿಗೂ ಎಷ್ಟು ಅಂತರವಿದೆ ?

ಶ್ರೀ ಎಸ್.ಆರ್. ಬೊಮ್ಮಾಯಿ.—ತೋಟಿ ತಳವಾರರಿಗೆ ತಿಂಗಳಿಗೆ ೧೨೫ ರೂಪಾಯಿ ಕೊಡಲಾಗುತ್ತಿದೆ. ಪಟೇಲ್ ಶ್ಯಾನುಭೋಗರುಗಳಿಗೆ ೬೦೦ ರೂಪಾಯಿ ಕೊಡಲಾಗುತ್ತಿದೆ. ವಾರ್ಷಿಕ ಆದಾಯ ೪೫೦೦ ರೂಪಾಯಿಗಳಿಗಿಂತ ಕಡಿಮೆ ಇರುವವರಿಗೆ ಕೊಡಲಾಗುತ್ತಿದೆ ಗ್ರಾಮ ಸಹಾಯಕರ ಮನವಿಯನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ (ಪಾಳ್ಯ) ಉಪ ಗ್ರಾಮಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

೧೨೫೦ ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು).- ಮಾನ್ಯ ವಿದ್ಯುತ್ ಗಣಿ ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಪಾಳ್ಯಗಳಿಗೆ ಗ್ರಾಮೀಣ ವಿದ್ಯುದ್ದೀಕರಣ ಕಾರ್ಯಕ್ರಮದ ಅಡಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ಸೇರಿರುವುದು ಮತ್ತು ಕಾರ್ಯಾದೇಶ ಮಂಜೂರಾಗಿರುವುದೂ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಇಲ್ಲಿಯವರೆವಿಗೆ ಈ ಕಾರ್ಯವನ್ನು ಕೈಗೊಳ್ಳದಿರುವ ವಿಚಾರ ಸರ್ಕಾರಕ್ಕೂ ತಿಳಿದಿದೆಯೆ ?

ಇ) ಜಾಗೃತೆಯಾಗಿ ಈ ಕಾರ್ಯಗಳನ್ನು ಕೈಗೊಳ್ಳಲು ಸರ್ಕಾರವು ಸೂಚನೆ ನೀಡುವುದೆ ?

ಶ್ರೀ ಜೆ.ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು) —

ಅ) ಮತ್ತು ಆ)ಕೂಡ್ಲಿಗಿ ತಾಲೂಕಿನ ೯ ಪಾಳ್ಯಗಳಿಗೆ ವಿದ್ಯುದ್ದೀಕರಣವನ್ನು ಮಾಡಲು ಮಂಜೂರಾತಿ ಕೊಟ್ಟಿತ್ತು. ಅವುಗಳಲ್ಲಿ ೪ ಪಾಳ್ಯಗಳ ವಿದ್ಯುದ್ದೀಕರಣವನ್ನು ಅಕ್ಟೋಬರ್ ೮೫ರ ವೇಳೆಗೆ ಮುಗಿಸಲಾಯಿತು. ಅನುದಾನದ ಕೊರತೆಯ ಕಾರಣದಿಂದ ಉಳಿದ ೫ ಪಾಳ್ಯಗಳ ವಿದ್ಯುದ್ದೀಕರಣವನ್ನು ಕೈಗೆದುಕೊಳ್ಳಲಾಗಲಿಲ್ಲ.

ಇ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಈ ಕಾರ್ಯವನ್ನು ಜಾಗ್ರತೆಯಾಗಿ ತೆಗೆದುಕೊಳ್ಳಲು ಸೂಚನೆ ನೀಡಲಾಗುವುದು.

ಶ್ರೀ ಕೆ.ವಿ. ರವೀಂದ್ರನಾಥಬಾಬು —ಹ್ಯಾಮ್ಲೆಟ್ ಹಳ್ಳಿಗಳಿಗೆ ವಿದ್ಯುತ್ ಕನೆಕ್ಷನ್ ಕೊಡುತ್ತಿಲ್ಲ ಕೂಡ್ಲಿಗಿ ತಾಲ್ಲೂಕಿನಲ್ಲಿ ಬರಗಾಲದ ತೊಂದರೆಯಿದೆ. ಶೇವಿನ್ನೂ ವಿಲೇಜ್‌ಗಳಲ್ಲಿ ವಿದ್ಯುತ್ ಸರಬರಾಜು ಸೆಂಟ್ ಪರ್ಸೆಂಟ್ ಕವರ್ ಮಾಡುತ್ತಾರೆ. ಶೇವಿನ್ನೂ ವಿಲೇಜ್‌ಗಳಿಗಿಂತ ಹ್ಯಾಮ್ಲೆಟ್‌ಗಳು ಹೆಚ್ಚಿಗೆ ಬಿಲ್ಡಪ್ ಆಗಿರುವುದರಿಂದ ಪವರ್ ಕನೆಕ್ಷನ್ ಕೊಡುವುದು ಬಹಳ ಅಗತ್ಯವಾಗಿದೆ. ನಾನು ನನ್ನ ಪ್ರಶ್ನೆಯಲ್ಲಿ ಎಲ್ಲಾ ಹಳ್ಳಿಗಳನ್ನೂ ಕವರ್ ಮಾಡಲಾಗುವುದೇ ಎಂದು ಕೇಳಿದ್ದಕ್ಕೆ ಸರಿಯಾದ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಮಾನ್ಯಸದಸ್ಯರ ಸಲಹೆಗಳನ್ನು ಗಮನಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿ.